# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ಮತ್ತು ಸಾರ್ವಜನಿಕರ ಸಹ ಭಾಗಿತ್ವದಲ್ಲಿ ಕೈಗೊಳ್ಳಲಾಗುವ ಸಂರಕ್ಷಣಾ ಕಾಮಗಾರಿಗಳಿಗೆ ನೀಡುವ ಅನುದಾನದ ಆರ್ಥಿಕ ಮಿತಿಯನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಸಂಕಇ 97 ಕೆಎಂಯು 2001, ದಿನಾಂಕ 19.11.2001
2. ಸರ್ಕಾರಿ ಆದೇಶ ಸಂಖ್ಯೆ: ಸಂಕಇ 97 ಕೆಎಂಯು 2001, ದಿನಾಂಕ 18.01.2002
3. ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 14 ಕೆಎಂಯು 2010, ದಿನಾಂಕ 12.05.2010
4. ಸರ್ಕಾರಿ ಆದೇಶ ಸಂಖ್ಯೆ: ಸಂಕಇ 80 ಕೆಎಂಯು 2002, ದಿನಾಂಕ 26.08.2002
5. ದಿನಾಂಕ 07.09.2012 ರಂದು ಕೊನೆಗೊಂಡ ಪತ್ರ ಸಂಖ್ಯೆ: ಆಪ್ರಾಸಂಪ/ಎಸಿಟಿ6/32/2011-12

794
1/11/12

## ಪ್ರಸ್ತಾವನೆ:

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ವತಿಯಿಂದ ರಾಜ್ಯ ಸಂರಕ್ಷಿತ ಸ್ಮಾರಕಗಳ ಸಂರಕ್ಷಣೆ, ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್(ರಿ)ನ ಸಹಯೋಗದೊಂದಿಗೆ ಮತ್ತು ಸ್ಥಳೀಯ ವಂತಿಗೆಯಿಂದ ಪರ್ಯಾಯ ವ್ಯವಸ್ಥೆಯನ್ನು ಕೆಲವೊಂದು ಷರತ್ತು ಮತ್ತು ನಿಬಂಧನೆಗೆ ಒಳಪಟ್ಟು ಕಾಮಗಾರಿಗಳನ್ನು ತೆಗೆದುಕೊಳ್ಳಲು ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್(ರಿ)ನ ಸಹಯೋಗದೊಂದಿಗೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ ರವರು ರಾಜ್ಯ ಸಂರಕ್ಷಿತ ಸ್ಮಾರಕಗಳ ಸಂರಕ್ಷಣೆ, ನಿರ್ವಹಣೆ ಮತ್ತು ಅಭಿವೃದ್ಧಿಗೊಳಿಸಲು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ನೇರ, ನಿರಂತರ, ದಕ್ಷ, ನಿಯತಕಾಲಿಕ ಮಾರ್ಗದರ್ಶನ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ ಹಾಗೂ ಮೇಲೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸದರಿ ಉನ್ನತ ಮಟ್ಟದ ಸಮಿತಿಯನ್ನು ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾಗಿದೆ

2002-03ನೇ ಸಾಲಿನಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಪರವಾಗಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್(ರಿ)ನ ಸಹಯೋಗದೊಂದಿಗೆ ಒಟ್ಟು 18 ಸ್ಮಾರಕಗಳ ಸಂರಕ್ಷಣೆ ಕೈಗೊಳ್ಳಲು ಕೆಲವೊಂದು ಷರತ್ತಿಗೊಳಪಡಿಸಿ ಮೇಲೆ (4) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ. ಅವುಗಳಲ್ಲಿ ಈ ಕೆಳಕಂಡ ಷರತ್ತುಗಳು ಸೇರಿರುತ್ತವೆ:-

1. ಸಂರಕ್ಷಣೆಗೆ ತಗಲುವ ವೆಚ್ಚದಲ್ಲಿ ಶೇ.40 ಭಾಗವನ್ನು ಸರ್ಕಾರ, ಶೇ.40 ಭಾಗವನ್ನು ಧರ್ಮೋತ್ಥಾನ ಟ್ರಸ್ಟನವರು ಹಾಗೂ ಶೇ.20 ಭಾಗವನ್ನು ಸ್ಥಳೀಯ ಸಾರ್ವಜನಿಕರು ಸೇರಿ ಭರಿಸುವುದು.

AC(1)(B)
22/11/2012

2. ಒಂದು ಸ್ಮಾರಕದ ಸಂರಕ್ಷಣೆಗೆ ಸರ್ಕಾರವು ನೀಡುವ ಅನುದಾನವು (ತಗಲುವ ಒಟ್ಟು ವೆಚ್ಚದ ಪ್ರತಿಶತ 40 ಭಾಗ) ರೂ.5.00ಲಕ್ಷಕ್ಕಿಂತ ಮೀರಕೂಡದು. ಒಂದು ವೇಳೆ ವೆಚ್ಚವು ಅಂದಾಜಿಗಿಂತ ಹೆಚ್ಚಿಗೆ ಆದರೆ ಅಂತಹ ವೆಚ್ಚವನ್ನು ಸ್ಥಳೀಯರಿಂದ ಸಂಗ್ರಹಿಸುವುದು.

ಪ್ರಸ್ತುತ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ರವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಈ 2002–03ನೇ ಸಾಲಿನಲ್ಲಿ ಅನುಮೋದನೆಗೊಂಡ ಕ್ರಿಯಾಯೋಜನೆಯು ಅನುಷ್ಠಾನಗೊಂಡು ಈಗಾಗಲೇ ಸುಮಾರು 8 ವರ್ಷಗಳಾಗಿದ್ದು, ಇತ್ತೀಚೆಗೆ ಕಾಮಗಾರಿಗಳಿಗೆ ಉಪಯೋಗಿಸುವ ವಸ್ತು ಮತ್ತು ಸಲಕರಣೆಗಳ ಧಾರಣೆ ಹಾಗೂ ಕಾರ್ಮಿಕರ ವೇತನದಲ್ಲಿ ಗಣನೀಯ ಹೆಚ್ಚಳ ಉಂಟಾಗಿರುವುದರಿಂದ ಮತ್ತು ಸಂರಕ್ಷಿಸಲ್ಪಟ್ಟ ಸ್ಮಾರಕಗಳ ಉತ್ತಮ ನಿರ್ವಹಣೆಗಾಗಿ ಕಟ್ಟಡದ ಸುತ್ತಲು ಸಮರ್ಪಕ ರೀತಿಯ ಪ್ರಾಕಾರ ನಿರ್ಮಿಸುವ ಅಗತ್ಯವಿರುವುದರಿಂದ ಪ್ರತಿ ಸ್ಮಾರಕದ ಸಂರಕ್ಷಣಾ ಕಾಮಗಾರಿಯ ವೆಚ್ಚದಲ್ಲಿ ಸರ್ಕಾರದ ಹಾಗೂ ಟ್ರಸ್ಟಿನ ಅನುದಾನದ ಗರಿಷ್ಠ ಮಿತಿಯನ್ನು ತಲಾ ರೂ.5.00ಲಕ್ಷಗಳಿಂದ ರೂ.10.00ಲಕ್ಷಗಳಿಗೆ ಹೆಚ್ಚಿಸಲು ವಾರ್ಷಿಕ ಅನುದಾನದ ಮಿತಿಯನ್ನು ರೂ.40.00ಲಕ್ಷದಿಂದ ರೂ.80.00ಲಕ್ಷಗಳಿಗೆ ಹೆಚ್ಚಿಸುವಂತೆ ನಿರ್ದೇಶಕರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ರವರು ಕೋರಿದ್ದು, ಅವರ ಕೋರಿಕೆಯು ಸಮಂಜಸವಾಗಿರುವುದರಿಂದ ಸರ್ಕಾರಿ ಆದೇಶ ಸಂಖ್ಯೆ: ಸಂಕಇ 80 ಕೆಎಂಯು 2002, ದಿನಾಂಕ: 26.08.2002ರ ಆದೇಶದ ಷರತ್ತು ಮತ್ತು ನಿಬಂಧನೆಯ ಅನುಬಂಧ–1 ರಲ್ಲಿನ ಕ್ರ.ಸಂ. 3ರಲ್ಲಿ ರೂ.5.00ಲಕ್ಷ ಎಂಬುದರ ಬದಲಿಗೆ ರೂ.10.00 ಲಕ್ಷವೆಂದು ಪರಿಷ್ಕೃತ ತಿದ್ದುಪಡಿ ಆದೇಶ ಹೊರಡಿಸುವಂತೆ ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಕಸಂಪಾಪ್ರ 2 ಕೆಎಂಯು 2011**
**ಬೆಂಗಳೂರು, ದಿನಾಂಕ: 17.11.2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಪರವಾಗಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್(ರಿ)ನ ಸಹಯೋಗದೊಂದಿಗೆ ಸ್ಮಾರಕಗಳ ಸಂರಕ್ಷಣೆ ಕೈಗೊಳ್ಳುವ ಕುರಿತು ದಿನಾಂಕ 26.08.2012ರ ಸರ್ಕಾರಿ ಆದೇಶ ಸಂಖ್ಯೆ ಸಂಕಇ 80 ಕೆಎಂಯು 2002ರ ಅನುಬಂಧ–1 ರ ಕ್ರ.ಸಂ 3 ರಲ್ಲಿ ಒಂದು ಸ್ಮಾರಕದ ಸಂರಕ್ಷಣೆಗೆ ಸರ್ಕಾರವು ನೀಡುವ ಗರಿಷ್ಠ ಅನುದಾನವು (ತಗಲುವ ಒಟ್ಟು ವೆಚ್ಚದ ಪ್ರತಿಶತ 40 ಭಾಗ) ರೂ.5.00 ಲಕ್ಷ ಎಂದು ನಿಗಧಿ ಪಡಿಸಿರುವುದರ ಬದಲಿಗೆ ಗರಿಷ್ಠ ರೂ.10.00 ಲಕ್ಷ ಅಥವಾ ಶೇ.40 ಭಾಗ ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಹೆಚ್ಚಿಸಿ ನಿಗಧಿಪಡಿಸಿದೆ.

ಇನ್ನುಳಿದಂತೆ ದಿನಾಂಕ 26.08.2012ರ ಸರ್ಕಾರಿ ಆದೇಶ ಸಂಖ್ಯೆ ಸಂಕಇ 80 ಕೆಎಂಯು 2002ರ ಅನುಬಂಧ–1 ರ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ । ಟಿಎಫ್‌ಪಿ 96 ದಿನಾಂಕ 10.7.96ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಬಿ.ಹೇಮಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆ
(ಆಡಳಿತ ಕನ್ನಡ)

ಇವರಿಗೆ:

1. ಮಹಾಲೇಖಪಾಲರು (ಎ&ಇ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣ, ದೊಡ್ಡಕೆರೆ ಮೈದಾನ, ಮೈಸೂರು
3. ಅಧ್ಯಕ್ಷರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್, ಶ್ರೀ ಕ್ಷೇತ್ರ ಧರ್ಮಸ್ಥಳ
4. ನಿರ್ದೇಶಕರು (ಪ್ರಾಚ್ಯವಸ್ತು), ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ದೊಡ್ಡಕೆರೆ ಮೈದಾನ, ಮೈಸೂರು
5. ನಿರ್ದೇಶಕರು (ವಸ್ತು ಸಂಗ್ರಹಾಲಯಗಳು), ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು
6. ಎಲ್ಲಾ ಉಪನಿರ್ದೇಶಕರುಗಳು/ಪುರಾತತ್ವ ಸಂರಕ್ಷಣಾ ಇಂಜಿನಿಯರ್‌ಗಳು– ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ರವರ ಮುಖಾಂತರ
7. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
8. ಸರ್ಕಾರದ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆರವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
9. ಸರ್ಕಾರದ ಉಪ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆರವರ ಆಪ್ತಶಾಖೆ, ವಿಕಾಸಸೌಧ, ಬೆಂಗಳೂರು
10. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.